# ಕರ್ನಾಟಕ ಗಮಕ ಕಲಾ ಪರಿಷತ್ತು (ರಿ.)

8, ಅಗಸ್ತ್ಯ ಎನ್‌ಕ್ಲೇವ್, 13ನೇ ಮುಖ್ಯರಸ್ತೆ, ಬಿ.ಎಸ್.ಕೆ. 1ನೇ ಹಂತ, ಶ್ರೀನಗರ, ಬೆಂಗಳೂರು–560050

---

## 2021–22ನೇ ಸಾಲಿನ ಪಾರೀಣ ಪರೀಕ್ಷೆಯ ಪ್ರಶ್ನೆ ಪತ್ರಿಕೆ : ಶಾಸ್ತ್ರ ವಿಭಾಗ

**ಅವಧಿ : 90 ನಿಮಿಷ** **ಅಂಕಗಳು : 50**

(ಉತ್ತರಗಳು ನೇರವಾಗಿರಲಿ. ನಿಗದಿತ ಅಂಕಗಳನ್ನೂ ಸಮಯವನ್ನೂ ಗಮನದಲ್ಲಿರಿಸಿಕೊಂಡು ಉತ್ತರ ಬರೆಯಿರಿ.)

1. ರಗಳೆಗಳಲ್ಲಿ ಎಷ್ಟು ವಿಧ? ಅವುಗಳ ಲಕ್ಷಣ ಮತ್ತು ನಿಯಮಗಳನ್ನು ಬರೆಯಿರಿ 05

2. ರಿಕ್ತಸ್ಥಾನಗಳನ್ನು ಸೂಕ್ತವಾಗಿ ತುಂಬಿರಿ: 05
   ಅ. ಸಾಹಿತ್ಯದ ಮೂರು ವಿಧಗಳು – ಪ್ರಭುಸಂಹಿತೆ, __________, ಮತ್ತು ಕಾಂತಾ ಸಂಹಿತೆ
   ಆ. ಛಂದಸ್ಸಿನ ____________ ಪ್ರಕಾರವನ್ನು ಹಾಡುಗಬ್ಬ, ಓದುಗಬ್ಬ ಎನ್ನುತ್ತಾರೆ.
   ಇ. ಗಮಕ ವಾಚನದಲ್ಲಿ ಪದಭಾವ ಮತ್ತು ________ ಎರಡೂ ಸಮಾನಮುಖ್ಯ
   ಈ. ಸಾಮಾನ್ಯವಾಗಿ ಮುಕ್ತಾಯದ ಪದ್ಯಗಳಿಗೆ ಹೊಂದುವ ರಾಗಗಳು __________, __________
   ಉ. ಕಾವ್ಯರಚನೆಯಲ್ಲಿ ರೂಪಕಗಳು, ವಿಗ್ರಹಗಳು ಮುಂತಾದುವನ್ನು _____________ ಎನ್ನುತ್ತಾರೆ.

3. ವಾರ್ಧಕ ಷಟ್ಪದಿಯ ಲಕ್ಷಣಗಳನ್ನು ವಿವರಿಸಿ 05

4. ಟಿಪ್ಪಣಿ ಬರೆಯಿರಿ: 3*5=15
   ಅ. ಗಮಕ ಕಲೆ
   ಆ. ಅಕ್ಷರಗಣ
   ಇ. ಷಟ್ಪದಿ
   ಈ. ಕಾವ್ಯವಾಚನದಲ್ಲಿ ನವರಸ
   ಉ. ಆದರ್ಶ ಗಮಕಿ

5. ಹೊಂದಿಸಿ ಬರೆಯಿರಿ: 05

| | |
|---|---|
| ಅ. ಅಠಾಣ | ಶೋಕರಸ |
| ಆ. ನಜಭಜಜಂಜರಂ | ಸೋಮೇಶ್ವರ ಶತಕ |
| ಇ. ಪುಲಿಗೆರೆ | ಉತ್ಪಲಮಾಲೆ |
| ಈ. ಭರಂನಭಭಂರಲಗಂ | ಚಂಪಕಮಾಲೆ |
| ಉ. ಸಾರಮತಿ | ವೀರರಸ |

6. ರಿಕ್ತಸ್ಥಾನಗಳನ್ನು ತುಂಬಿರಿ: 05
   ಅ. ರಗಳೆಯಲ್ಲಿ ____________ ಸಾಲುಗಳು ಇರುತ್ತವೆ.
   ಆ. ವಾರ್ಧಕ ಷಟ್ಪದಿಯಲ್ಲಿ 3 ಮತ್ತು 6ನೇ ಸಾಲುಗಳಲ್ಲಿ ತಲಾ ________ ಮಾತ್ರೆಗಳಿರುತ್ತವೆ.
   ಇ. __________ ರಸವು ರಸಗಳ ರಾಜ ಎನಿಸಿಕೊಂಡಿದೆ
   ಈ. ನವರಸಗಳಲ್ಲಿ ಭೀಭತ್ಸ, ಭಯಾನಕ ಮತ್ತು ______ ರಸಗಳು ನಪುಂಸಕ ಲಿಂಗಕ್ಕೆ ಸೇರುತ್ತವೆ.
   ಉ. ಕುವೆಂಪುರವರ ರಾಮಾಯಣ ದರ್ಶನಂ _______________ ಛಂದಸ್ಸಿನಲ್ಲಿದೆ

7. ಗಮಕದಲ್ಲಿ ಸಾಹಿತ್ಯ–ಸಂಗೀತಗಳ ಮಿಳಿತ ಹೇಗಿರಬೇಕು ಎಂಬ ಬಗ್ಗೆ ನಿಮ್ಮ ಚಿಂತನೆಯನ್ನು ಬರೆಯಿರಿ. 05

8. "ಕಾವ್ಯಸಾಹಿತ್ಯದಿಂದ ವ್ಯಕ್ತಿಯ ಆಂತರಿಕ ಮತ್ತು ಬೌದ್ಧಿಕ ವಿಕಾಸ ಸಾಧ್ಯವಾಗುತ್ತದೆ" ಈ ಮಾತನ್ನು ನೀವು ಹೇಗೆ ಸಮರ್ಥಿಸಬಹುದು? 05

* * * * *